ಬೆಂಗಳೂರು ಮತ್ತು ಬಿ ವಿ ಭೂಮರೆಡ್ಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ಸಂಸ್ಥೆಗಳಿಂದ ದೃಢೀಕರಿಸಲ್ಪಟ್ಟಿರುತ್ತದೆ

ಈ) ಈ ಮೇಲಿನ ವಿವರಗಳಿಂದಾಗಿ ಈ ಕಟ್ಟಡದ ಕಾಮಗಾರಿಯು ಕಳಪೆಯಾಗಿರುವುದಿಲ್ಲ ಹಾಗೂ ಇದು ಪ್ರಗತಿಯಲ್ಲಿದೆ

823 (1296) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಅಕ್ರಮ ಮಜೂರಾತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಅದರಲ್ಲಿ ಪರಿಶಿಷ್ಟ ಪಂಗಡದ ಅರ್ಜಿಗಳ ಸಂಖ್ಯೆ ಎಷ್ಟು ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು, (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಆ) ರಾಜ್ಯದಲ್ಲಿ ಇನ್ನೂ ಎಷ್ಟು ತಾಲ್ಲೂಕುಗಳಲ್ಲಿ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಬೇಕಾಗಿದೆ, ಇದನ್ನು ರಚಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳ ಸಂಖ್ಯೆ.21,85,635 ಅದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅರ್ಜಿಗಳ ಸಂಖ್ಯೆ 5,60,062 ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಬಾಕಿ ಇರುವ ಅರ್ಜಿಗಳ ಕುರಿತು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳ ಮುಂದೆ ಮಂಡಿಸಿ ಇತ್ಯರ್ಥಪಡಿಸಲಾಗುವುದು ಅರ್ಜಿಗಳನ್ನು ಇತ್ಯರ್ಥಪಡಿಸುವ ಅಂತಿಮ ದಿನಾಂಕವನ್ನು ಕಾಯ್ದೆಗೆ ತಿದ್ದುಪಡಿ ತಂದು ದಿನಾಂಕ-26 04 2008ರ ವರೆಗೆ ವಿಸ್ತರಿಸಲಾಗಿದೆ

ಆ) 54 ತಾಲ್ಲೂಕುಗಳಿಗೆ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಬೇಕಾಗಿದೆ ಈ ತಾಲ್ಲೂಕುಗಳಿಗೆ ಸಮಿತಿಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಅನುಬಂಧ

ಕ್ರ ಸಂ	ಜಿಲ್ಲೆ	ನಮೂನೆ-50ರಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳು	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರ ಒಟ್ಟು ಅರ್ಜಿಗಳು	ನಮೂನೆ-53ರಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳು	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರ ಒಟ್ಟು ಅರ್ಜಿಗಳು
1	ಮೈಸೂರು	55354	17642	57247	16658
2	ಚಾಮರಾಜನಗರ	20280	6747	13706	4327

F34

3	ಮಂಡ್ಯ	52917	6638	66049	9751
4	ಹಾಸನ	94908	21587	84592	18161
5	ಚಿಕ್ಕಮಗಳೂರು	65087	16425	77178	17880
6	ಕೊಡಗು	14612	1900	13921	1123
7	ದಕ್ಷಿಣ ಕನ್ನಡ	113730	14856	111387	8281
8	ಉಡುಪಿ	50358	5500	58453	5630
9	ಬೆಳಗಾಂ	13735	7665	7404	3006
10	ಬಿಜಾಪುರ	2034	1362	2913	1905
11	ಬಾಗಲಕೋಟೆ	4029	2392	3729	2061
12	ಧಾರವಾಡ	5091	1767	2895	679
13	ಹಾವೇರಿ	16310	4998	11310	5039
14	ಗದಗ	5326	3544	1865	1182
15	ಉತ್ತರ ಕನ್ನಡ	41049	2464	26258	3323
16	ಬಳ್ಳಾರಿ	25267	14304	19153	11146
17	ಬೀದರ	9580	428	5292	52
18	ಗುಲ್ಬರ್ಗಾ	24991	15761	13243	7568
19	ರಾಯಚೂರು	7105	5261	5696	3677
20	ಕೊಪ್ಪಳ	8622	4280	7684	3078
21	ಬೆಂಗಳೂರು ನಗರ	23134	10903	20042	7516
22	ಬೆಂಗಳೂರು ಗ್ರಾಮಾಂತರ	57767	22245	72250	30749
23	ಕೋಲಾರ	87702	17651	71826	4815
24	ತುಮಕೂರು	90211	16338	88711	14322
25	ಚಿತ್ರದುರ್ಗ	52222	26836	60742	32867
26	ದಾವಣಗೆರೆ	38740	18052	44576	20468
27	ಶಿವಮೊಗ್ಗ	110745	20800	145601	36452
	ಒಟ್ಟು	1091909	288346	1093726	271716

825 (1379) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿರುವ ಒಟ್ಟು ಹೋಬಳಿಗಳು ಎಷ್ಟು (ಜಿಲ್ಲಾವಾರು ವಿವರ ನೀಡುವುದು),